ಇಂದಿರಾ ಆವಾಸ್ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗಳಿಗೆ 30 ರಂತೆ ಒಟ್ಟು 1748 ಗ್ರಾಮ ಪಂಚಾಯಿತಿಗಳಿಗೆ 53299 ಮನೆಗಳ ಗುರಿಯನ್ನು ನೀಡಲಾಗಿದೆ

2) ಗ್ರಾಮೀಣ ಭಾಗದಲ್ಲಿರುವ ವಸತಿಹೀನರ ಸಮೀಕ್ಷೆಯನ್ನು 2003ರ ಜೂನ್ ಮಾಹೆಯಲ್ಲಿ ನಡೆಸಲಾಗಿದೆ

3) ಒಟ್ಟು ರಾಜ್ಯದಲ್ಲಿ **1226345** ವಸತಿ ಹೀನರು **1042986** ನಿವೇಶನ ರಹಿತರು ಲಭ್ಯವಿರುತ್ತಾರೆ

4) ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ಯೋಜನೆಗಳಡಿ ಮನೆಗಳು ಮಂಜೂರಾಗಿರುತ್ತವೆ

ಸಂಖ್ಯೆ	ಯೋಜನೆಗಳು	ಗುರಿ
1	ಗ್ರಾಮೀಣ ಆಶ್ರಯ	340560
2	ಇಂದಿರಾ ಆವಾಸ್	53299

5) ಈ ವಸತಿ ಸಮಸ್ಯೆಯನ್ನು ಮುಂದಿನ ವರ್ಷಗಳಲ್ಲಿ ಸರ್ಕಾರವು ಗುರಿ ಮತ್ತು ಹಣಕಾಸಿನ ಕಡೆಗೆ ಹೆಚ್ಚಿನ ಆದ್ಯತೆ ನೀಡಿ ನಿವಾರಿಸಲಾಗುವುದು

1624 (2312) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

01) ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಹಾಗೂ ಅನುದಾನಿತ ಶಾಲಾ ಶಿಕ್ಷಕರಿಗೆ ರೂ 200–00 ವಿಶೇಷ ಭತ್ಯೆಯನ್ನು ನೀಡುತ್ತಿರುವುದು ನಿಜವೇ,

02) ನಿಜವಾದಲ್ಲಿ, ಯಾವಾಗಿನಿಂದ ನೀಡಲಾಗುವುದು,

03) ಹಾಗಿದ್ದಲ್ಲಿ, ಶಿಕ್ಷಕೇತರ ಸಿಬ್ಬಂದಿಗಳಿಗೆ ಈ ಸೌಲಭ್ಯ ನೀಡದಿರಲು ಕಾರಣಗಳೇನು,

04) ಈ ಕುರಿತು ಸರ್ಕಾರ ತಾರತಮ್ಯ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಲಾಗುವುದು [ವಿವರ ನೀಡುವುದು]?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

01) ಹೌದು

02) ಸರ್ಕಾರದ ಆದೇಶ ಸಂಖ್ಯೆ ಅಇ 14 ಎಸ್ಆರ್‌ಪಿ 2006, ದಿನಾಂಕ 12–05–2006ರನ್ವಯ ಸರ್ಕಾರಿ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಗಳ ಶಾಲಾ ಶಿಕ್ಷಕರಿಗೆ ಮಾಸಿಕ ರೂ 200–00ಗಳ ವಿಶೇಷ ಭತ್ಯೆಯನ್ನು ಮಧ್ಯಂತರ ಪರಿಹಾರವಾಗಿ ದಿನಾಂಕ 01–04–2006ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದೆ

03, 04) 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ಶಿಕ್ಷಕರಿಗೆ ರೂ 200–00ಗಳ ವಿಶೇಷ ಭತ್ಯೆಯನ್ನು ಮಂಜೂರು ಮಾಡಲಾಗಿದೆ ಇತರರಿಗೆ ಅಂದರೆ ಶಿಕ್ಷಕೇತರ ಸಿಬ್ಬಂದಿಗಳಿಗೆ 5ನೇ ವೇತನ ಆಯೋಗದಲ್ಲಿ ರೂ 200–00ಗಳ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವುದಿಲ್ಲ ಆದ್ದರಿಂದ ಶಿಕ್ಷಕೇತರಿಗೆ ಈ ಸೌಲಭ್ಯ ಕಲ್ಪಿಸಿರುವುದಿಲ್ಲ

1625 (2314) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್‌ಗಾಂಧಿ ವಸತಿ ಇಂದಿರಾ ಆವಾಸ್ ಯೋಜನೆ ಇದರಲ್ಲಿ ವಸತಿ ಯೋಜನೆಗಾಗಿ ಬಿಡುಗಡೆಯಾಗುವ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು, (ಜಿಲ್ಲಾವಾರು ವಿಧಾನ ಸಭಾಕ್ಷೇತ್ರಗಳ ಸಹಿತ ವಿವರ ನೀಡುವುದು),

ಆ) ಈ ಅನುದಾನದ ಮೊತ್ತವು ಸಾಕಾಗದೆ ಯೋಜನೆ ಅರ್ಧಕ್ಕೆ ನಿಂತಿರುವ ಪ್ರಕರಣಗಳು ರಾಜ್ಯದಲ್ಲಿ ಎಲ್ಲಾದರೂ ಜರುಗಿವೆಯೆ, ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು, ಇದಕ್ಕಾಗಿ ಹೆಚ್ಚಿನ ಅನುದಾನ ನೀಡಲಾಗುವುದೇ,

ಇ) ಇಲ್ಲದ್ದಿದ್ದಲ್ಲಿ ಕಾರಣಗಳೇನು,

ಈ) ಮನೆ ಮಂಜೂರಾಗಿ ಕಾಮಗಾರಿ ಪೂರ್ತಿಯಾದ ಮೇಲೆ ಹಣ ಬಿಡುಗಡೆಯಾಗಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು,

ಉ) ಸರಿಯಾದ ಸಮಯಕ್ಕೆ ಹಣ ಬಿಡುಗಡೆ ಮಾಡಲು ಇರುವ ತೊಂದರೆ–ಗೊಂದಲಗಳೇನು,